


ಡಾಕ್ಟರ್: ಮೀನು, ಕೋಳಿ, ಏಡಿ ತಿನ್ನುವುದನ್ನು ನೀವು ನಿಲ್ಲಿಸಬೇಕು.

ರೋಗಿ: ಇದೇನು ಡಾಕ್ಟ್ರೇ ಅನ್ಯಾಯವಾಗಿದೆ? ಅವುಗಳು ತಿನ್ನುವುದನ್ನು ನಾನ್ಹೇಗೆ ನಿಲ್ಲಿಸಬಲ್ಲೆ?

★★★

ಮೇಷ್ಟ್ರು: ನಾನು ಹೇಳಿ ಕೊಡೋ ಪಾಠದಲ್ಲಿ ನಿಮಗೆ ಸಂದೇಹ ಬರುವುದಿಲ್ವೇ?

ರಮೇಶ್: ತಾವು ಪಾಠ ಹೇಳಿ ಮುಗಿಸುವುದರೊಳಗೆ ನಾವು ಚೆನ್ನಾಗಿ ನಿದ್ದೆ ಮಾಡ್ಬಿಡ್ತೀವಿ ಸರ್.

★★★

ನರೇಂದ್ರ: ನಿನ್ನ ಮೊಬೈಲ್ ನಂಬರ್ ಕೇಳಿದರೆ ಅಷ್ಟು ಉದ್ದವಾದ ನಂಬರ್ ಕೊಡ್ತಿಯಲ್ಲೋ?

ಸುರೇಂದ್ರ: ನಾನು ನನ್ನ ಆಧಾರ್ ನಂಬರನ್ನು ಮೊಬೈಲ್ ನಂಬರಿಗೆ ಜೋಡಿಸಿದ್ದೇನೆ.

★★★

ಶೇಖರ್: ನಿಮ್ಮ ಅಂಗಡಿಯಲ್ಲಿ ಎರಡು ಕಿಲೋ ಸಕ್ಕರೆ ಕೊಂಡುಕೊಂಡಿದ್ದೆ. ಮನೆಗೆ ಹೋಗಿ ನೋಡಿದರೆ 200 ಗ್ರಾಂ ಕಡಿಮೆ ಇದೆ.

ಅಂಗಡಿ ಮಾಲೀಕ: ನೀವು ಮನೆಗೆ ಹೇಗೆ ಹೋಗಿದ್ದೀರಿ?

ಶೇಖರ್: ನಡೆದೇ ಹೋಗಿದ್ದೆ.

ಅಂಗಡಿ ಮಾಲೀಕ: ನಡೆದಾಡಿದರೆ ಶುಗರ್ ಕಡಿಮೆಯಾಗುವುದು ಅಂತ ಡಾಕ್ಟರ್ ಹೇಳ್ತಾರಲ್ಲ?

★★★

ಹೆಂಡತಿ: ಏನ್ರಿ ನಾಳೆ ನಮ್ಮ ಮದುವೆಯಾದ ದಿನ. ನಾನು ಇದುವರೆಗೆ ನೋಡದ ಸ್ಥಳಕ್ಕೆ ನನ್ನನ್ನು ಕರೆದುಕೊಂಡ್ಹೋಗ್ತೀರಾ?

ಗಂಡ: ನೀನೇನು ಚಿಂತೆ ಮಾಡ್ಬೇಡ ಕಣೆ. ನಮ್ಮ ಮನೆಯ ಅಡಿಗೆ ಕೋಣೆಗೆ ನಿನ್ನ ಕರೆದೊಯ್ತೀನಿ.

★★★

ಜಗನ್: ಡಾಕ್ಟರ್! ದೀರ್ಘ ಕಾಲ ಬಾಳಬೇಕಾದರೆ ಏನ್ ಮಾಡಬೇಕು?

ಡಾಕ್ಟರ್: ನೀವು ಕೂಡಲೆ ಮದುವೆಯಾಗಬೇಕು.

ಜಗನ್: ಮದುವೆ ಮಾಡಿಕೊಂಡ ಮೇಲೆ.....

ಡಾಕ್ಟರ್: ಇಂತಹ ಚಿಂತನೆಗಳೇ ನಿಮಗೆ ಬರೋದಿಲ್ಲ..

★★★

ಬ್ಯಾಂಕ್ ಮ್ಯಾನೇಜರ್: ನಿಮಗೆ ಸೇವಿಂಗ್ಸ್ ಬ್ಯಾಂಕ್ ಖಾತೆ ಕೊಟ್ಟಿದ್ದೇನೆ. ಕರೆಂಟ್ ಬ್ಯಾಂಕ್ ಖಾತೆನೇ ಬೇಕಂತ ಯಾಕೆ ಕೇಳ್ತೀರಿ?

ರಘು: ನಾನು ಬೆಸ್ಕಾಂನಲ್ಲಿ ಕೆಲಸ ಮಾಡುತ್ತೇನೆ ಸರ್.

★★★

ರಾಜೇಶ್: ನನ್ನೇಲೆ ಕೋಪ ಬಂದರೆ, ತಾನೇ ಅಡಿಗೆ ಮಾಡೋಕೆ ಶುರು ಮಾಡುವಳು ನನ್ನ ಹೆಂಡತಿ.

ತರುಣ್: ಆ ಮೇಲೆ...?

ರಾಜೇಶ್: ಆ ಶಿಕ್ಷೆಯಿಂದ ತಪ್ಪಿಸಿಕೊಳ್ಳಲು 'ನಾನೆ ಅಡುಗೆ ಮಾಡ್ತೀನಿ' ಎಂದು ನಾನು ಶರಣಾಗಿ ಬಿಡುವೆ.

**(ಸಂಗ್ರಹ) ಡಾ. ವಿ. ಪುಗಳೇಂದಿ, ಬಳ್ಳಾರಿ.**

ಮಗ: ಅಮ್ಮಾ ದೇವರು ಬಚ್ಚಲು ಮನೆಗೆ ಹೋಗ್ತಾನಾ?

ತಾಯಿ: ಇಲ್ಲವಲ್ಲಾ! ಯಾಕೆ ಹಾಗೆ ಕೇಳ್ತೀಯಾ?

ಮಗ: ಮತ್ತೆ ಅಪ್ಪ, ಅಯ್ಯೋ ದೇವರೆ ನೀನು ಇನ್ನೂ ಒಳಗೆ ಇದೀಯಾ ಅಂತ ಅಂತಿದ್ರು.

★★★

ಗುಂಡ: ಕೇಳಿದೆಯೇನೇ ಪಕ್ಕದ ಮನೆಯ ಹುಡುಗಿ ಪಿಯುಸಿಯಲ್ಲಿ 600ಕ್ಕೆ 599 ಅಂಕಗಳನ್ನು ಪಡೆದುಕೊಂಡಿದ್ದಾಳಂತೆ. ಇನ್ನು ಒಂದು ಅಂಕ ಎಲ್ಲಿ ಹೋಯಿತೋ?

ಹೆಂಡತಿ: ಅದನ್ನು ನಿಮ್ಮ ಮಗ ತಗೊಂಡಿದಾನೆ.

★★★

ಗಿರಾಕಿ: ಏ ಮಾಣಿ ಏನಯ್ಯಾ ಇದು? ಸಾಂಬಾರಿನಲ್ಲಿ ಗುಂಡಿ?

ಮಾಣಿ: ಅರೆ ಇದು ಇಲ್ಲಿದೆಯಾ ಸಾರ್! ಮೊನ್ನೆಯಿಂದ ಇದನ್ನು ಹುಡುಕ್ತಾನೇ ಇದ್ದೆ. ಥ್ಯಾಂಕ್ಯೂ ಸಾರ್!

★★★

ವಿದ್ಯಾರ್ಥಿ: ಸಾರ್, ನಮ್ಮ ತಂದೆ ಹೇಳ್ತಾರೆ. ನಾವೆಲ್ಲಾ ಲಕ್ಷಾಂತರ ವರ್ಷಗಳ ಹಿಂದೆ ಕೋತಿಗಳಾಗಿದ್ದೆವಂತೆ, ಹೌದಾ ಸಾರ್?

ಉಪಾಧ್ಯಾಯರು: ನಿಮ್ಮ ಕುಟುಂಬದ ವಿಚಾರ ಇಲ್ಲಿ ಹೇಳೋಕಾಗೋಲ್ಲ. ಇದು ಸೈನ್ಸ್ ಕ್ಲಾಸ್.

**(ಸಂಗ್ರಹ) ಎಂ.ಕೆ. ಮಂಜುನಾಥ್, ಬೆಂಗಳೂರು**